ಗ್ರೂಪ್–ಡಿ 38

ಒಟ್ಟು 346

ಆ. ಸಾರಿಗೆ ಇಲಾಖೆಯಲ್ಲಿ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿಯಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ

ಈ. ಉದ್ಭವಿಸುವುದಿಲ್ಲ

ಉ. ಉದ್ಭವಿಸುವುದಿಲ್ಲ

1621(1832) ಶ್ರೀ ಪರಮೇಶ್ವರ್ ನಾಯ್ಕ (ಹರಪನಹಳ್ಳಿ) ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿದ್ದ ಸರ್ಕಾರದ ಉನ್ನತ ಮಟ್ಟದ ಸಮಿತಿ ಈಗ ಅಸ್ಥಿತ್ವದಲ್ಲಿಲ್ಲದಿರುವುದು ನಿಜವಲ್ಲವೇ;

ಆ. ಹಾಗಿದ್ದಲ್ಲಿ, ಅದನ್ನು ಪುನರ್ ರಚಿಸಲು ಇರುವ ಅಡ್ಡಿ ಆತಂಕಗಳೇನು?

ಇ. ಈ ಸಮಿತಿಯನ್ನು ಪುನರ್ ಅಸ್ಥಿತ್ವಕ್ಕೆ ಯಾವಾಗ ತರಲಾಗುವುದು?

ಡಾ : ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ. ಹೌದು.

ಆ. ಸರ್ಕಾರದ ಮೆಟ್ಟದ ಉನ್ನತ ಸಮಿತಿಯು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು 1995ರ 16 ನೇ ನಿಯಮದಲ್ಲಿ ಅವಕಾಶವಿರುತ್ತದೆ. ಈ ಸಮಿತಿಯಲ್ಲಿ ಗೃಹ, ಆರ್ಥಿಕ ಮತ್ತು ಸಮಾಜ ಕಲ್ಯಾಣ ಸಚಿವರು, ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಸೇರಿದ ಚುನಾಯಿತ ಲೋಕಸಭೆ / ರಾಜ್ಯಸಭೆ/ ವಿಧಾನಸಭೆ/ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ರಾಜ್ಯಮಟ್ಟದ ಇನ್ನಿತರ ಉನ್ನತ ಅಧಿಕಾರಿಗಳು ಸದಸ್ಯರಿರಬೇಕು.

ಸಮಿತಿಯನ್ನು ಪುನರ್ ರಚಿಸಲು ಕ್ರಮಕ್ಕೆಗೊಳಲಾಗುತ್ತಿದೆ.

ಇ. ಸಮಿತಿಯನ್ನು ಶೀಘ್ರವಾಗಿ ಪುನರ್ ರಚಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

1622(2142) ಶ್ರೀ ಪಾಟೀಲ್ ಬಿ.ಆರ್. (ಆಳಂದ್) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಕರ್ನಾ ಟಕ ರಾಜ್ಯದಲ್ಲಿರುವ ದೊಡ್ಡ ನಗರ ಮಟ್ಟದ ಪಟ್ಟಣಗಳ ಸಂಖ್ಯೆ ಎಷ್ಟು; ಹಾಗೂ ಇವುಗಳಲ್ಲಿ ಪ್ಲಾಸ್ಟಿಕ್ ಸೇರಿದಂತೆ ಪ್ರತಿದಿನ ಶೇಖರವಾಗುವ ಘನತ್ಯಾಜ್ಯ ವಸ್ತುಗಳ ಪ್ರಮಾಣ ಎಷ್ಟು; ವಿವರ ನೀಡುವುದು ;

2. ಈ ಘನತ್ಯಾಜ್ಯ ವಸ್ತುಗಳಿಂದ ಕಾಂಪೊಸ್ಟ್ ಮತ್ತು ಇಂಧನ ಹಾಗೂ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ;

3. ಈ ಕಾರ್ಯವನ್ನು ಟೆಂಡರ್ ಮೂಲಕ ಖಾಸಗಿಯವರಿಗೆ ವಹಿಸುವುದಾಗಲಿ ಅಥವಾ ಪುರಸಭೆ, ಮಹಾನಗರ ಪಾಲಿಕೆಗಳಿಗೆ ಜವಾಬ್ದಾರಿ ವಹಿಸಲಾಗುವುದೇ?

4. ಕೇಂದ್ರ ಸರ್ಕಾರದ ಯಾವುದಾದರೂ ಸಂಸ್ಥೆಗಳೊಡನೆ ಈ ಬಗ್ಗೆ ಸಂಪರ್ಕಿಸಲಾಗಿದೆಯೇ; ಸಂಪರ್ಕಿಸದಿದ್ದರೆ ಅದರ ಪ್ರಗತಿ ಏನು?

ಶ್ರೀ ಎಸ್. ಆರ್.ಮೋರೆ(ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು):

1. ದೊಡ್ಡ ನಗರ ಸಂಖ್ಯೆ : 47

ಪಟ್ಟಣಗಳ ಸಂಖ್ಯೆ : 179

ಪ್ರತಿ ದಿನ 3892.61 ಟನ್‌ಗಳಾಗಿರುತ್ತದೆ.

2. ಈ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಕಂಪೋಸ್ಟ್ ಅಥವಾ ಮಿಥೇನ್ ಅನಿಲ ಉತ್ಪಾದಿಸುವ ಯೋಜನೆಯನ್ನು ಬೆಂಗಳೂರು ಹೊರತುಪಡಿಸಿ 8 ಪಟ್ಟಣಗಳಾದ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು, ಹುಬ್ಬಳ್ಳಿ–ಧಾರವಾಡ, ರಾಯಚೂರು, ಬೆಳಗಾವಿ ಹಾಗೂ ಗುಲ್ಬರ್ಗಾಗಳಲ್ಲಿ ಕೈಗೊಳ್ಳಲಾಗಿದೆ.

3. ಕಾರ್ಯವನ್ನು ನಿರ್ಮಾಣ, ನಿರ್ವಹಣೆ ಹಾಗೂ ವರ್ಗಾವಣೆ ಆಧಾರದ ಮೇಲೆ ಕೈಗೊಳ್ಳಲು ಮೇಲೆ ಗುರುತಿಸಿದ 8 ನಗರಗಳಲ್ಲಿ ಯೋಜಿಸಿದ್ದು, ಟೆಂಡರ್ ಕಾರ್ಯವನ್ನು ನಿರ್ವಹಿಸಲು iDeck (Infrastructure Development Corporation, (Karnataka) Limited) ಸಂಸ್ಥೆಗೆ ವಹಿಸಿಕೊಡಲಾಗಿದ್ದು, ಇದು ಪ್ರಗತಿಯಲ್ಲಿದೆ. ಈ ಯೋಜನೆಯ ಅನುಷ್ಠಾನದ ಅನುಭವ/ ಯಶಸ್ಸನ್ನಾಧರಿಸಿ ಇತರ ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಿಸಲಾಗುವುದು.

4. ಇಲ್ಲ.

1623(2143) ಶ್ರೀ ಪಾಟೀಲ್ ಎ.ಆರ್. (ಅಳಂದ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯ ಹೆದ್ದಾರಿಗಳ ಕನಿಷ್ಠ ಮತ್ತು ಗರಿಷ್ಟ ಧಾರಣ ಸಾಮರ್ಥ್ಯವೇನು;

ಆ. ಈ ಹೆದ್ದಾರಿಗಳಲ್ಲಿರುವ ಮೋರಿಗಳ ಧಾರಣ ಸಾಮರ್ಥ್ಯವೇನು;

ಇ. ಹೊಸಮಾದರಿಯ ಟ್ರೈಲರ್ ಹೊಂದಿದ ವಾಹನಗಳ ಸಂಚಾರಕ್ಕೆ ಎಷ್ಟು ಮಳಿಗೆ ರಸ್ತೆಗಳು ಯೋಗ್ಯವಾಗಿವೆ;

ಈ. ಮಿತಿಮೀರಿದ ಸರಕನ್ನು ಹೇರಿ ಸಂಚರಿಸುವ ವಾಹನಗಳಿಂದ ರಾಜ್ಯ ಹೆದ್ದಾರಿಗಳನ್ನು ಪದೇಪದೇ ದುರಸ್ಥಿ ಮಾಡುವ ಕ್ರಮದಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟ ಎಷ್ಟು;

ಉ. ಮಿತಿಮೀರಿ ಭಾರ ಹೇರಿಕೆಯ ವಾಹನಗಳನ್ನು ನಿಯಂತ್ರಿಸುವಲ್ಲಿ ಸಂಬಂಧಪಟ್ಟ ಸ್ಥಾರಿಗೆ ಅಧಿಕಾರಿಗಳ ಪಾತ್ರವೇನು;

ಊ. ಗುಲ್ಬರ್ಗಾ ಜಿಲ್ಲೆ ರಿಬ್ಬನಪಲ್ಲಿ ವಾಗ್ದಾರಿ ರಾಜ್ಯ ಹೆದ್ದಾರಿಗಳಲ್ಲಿ ಸಿಮೆಂಟ್ ಕಾರ್ಖಾನೆಗಳಿಂದ ಅಪಾರ ಪ್ರಮಾಣದ ಬಾರಿ ಭಾರ ಹೊತ್ತು ರಸ್ತೆ ಹಾಳು ಮಾಡುವ ವಾಹನಗಳ ನಿಯಂತ್ರಣದಲ್ಲಿ ಸಾರಿಗೆ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಿದ, ಸಿಮೆಂಟ್ ಸಾಗಾಣಿಕೆದಾರರೊಡನೆ ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ. ಬಂದಿದ್ದಲ್ಲಿ, ಅವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. 15.24 ಟನ್ ಮತ್ತು 20.00 ಟನ್.

ಆ. 20.00 ಟನ್‌ಗಳು

ಇ. ದ್ವಿಪಥ ಮತ್ತು ಅದಕ್ಕಿಂತಲೂ ಹೆಚ್ಚಿನ ಪಥದ ರಸ್ತೆಗಳು ಯೋಗ್ಯವಾಗಿವೆ.

ಈ. ನಿರ್ಧರಿಸಿರುವುದಿಲ್ಲ.

ಉ. ಮೋಟಾರು ವಾಹನ ಕಾಯ್ದೆಯ ಕಲಂ 194 ರ ಪ್ರಕಾರ ಕ್ರಮವಹಿಸುವುದು.

ಊ. ಇಲ್ಲ.

ಋ. ಉದ್ಭವಿಸುವುದಿಲ್ಲ.